ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2018–19 : ದಿನಾಂಕ : 1–08–2018

# ಪತ್ರಿಕಾ ಆಮಂತ್ರಣ

**1.** ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ ಬಹಿರಂಗ ವಿಚಾರಣೆಯ ಅಧಿವೇಶನ

ಉದ್ಘಾಟನೆ:
ಶ್ರೀ ಹೆಚ್.ಎಲ್. ದತ್ತು
ಅಧ್ಯಕ್ಷರು, ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ

ಕಾರ್ಯಕ್ರಮದಲ್ಲಿ ಭಾಗವಹಿಸುವವರು:
ನ್ಯಾಯಮೂರ್ತಿ ಪಿನಾಕಿ ಚಂದ್ರ ಘೋಷ್, ನ್ಯಾಯಮೂರ್ತಿ ಡಿ. ಮುರುಗೇಶನ್,
ಜ್ಯೋತಿಕ ಕಾಲ್ರಾ, ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ ಸದಸ್ಯರು
ಟಿ.ಎಮ್.ವಿಜಯ ಭಾಸ್ಕರ್, ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ
ನೀಲಮಣಿ ಎನ್ ರಾಜು, ರಾಜ್ಯ ಪೊಲೀಸ್ ಮಹಾ ನಿರ್ದೇಶಕರು ಹಾಗೂ ಮಹಾ ನಿರೀಕ್ಷಕರು

ದಿನಾಂಕ: 2–8–2018, ಗುರುವಾರ, ಸಮಯ: ಬೆಳಿಗ್ಗೆ 10–00 ಗಂಟೆಗೆ
ಸ್ಥಳ: ಕೊಠಡಿ ಸಂಖ್ಯೆ 419, ವಿಕಾಸ ಸೌಧ, ಬೆಂಗಳೂರು

**2.** ಮಾನವರಹಿತ ವೈಮಾನಿಕ ವ್ಯವಸ್ಥೆ ಪ್ರಾಯೋಗಿಕ ಯೋಜನೆಯ ಉದ್ಘಾಟನೆ ಸಮಾರಂಭ:

ಉದ್ಘಾಟನೆ:
ಕೆ.ಜೆ. ಜಾರ್ಜ್
ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು.

ಮುಖ್ಯ ಅತಿಥಿ:
ಎನ್. ಹೆಚ್. ಶಿವಶಂಕರ ರೆಡ್ಡಿ, ಕೃಷಿ ಸಚಿವರು

ಕೃಷ್ಣ ಭೈರೇಗೌಡ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ , ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು.

ದಿನಾಂಕ: 02–08–2018, ಗುರುವಾರ, ಸಮಯ: ಬೆಳಿಗ್ಗೆ 11.00 ಗಂಟೆಗೆ
ಸ್ಥಳ: ಆಟದ ಮೈದಾನ, ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯ, ಜಿ.ಕೆ.ವಿ.ಕೆ ಆವರಣ, ಬೆಂಗಳೂರು.

3. ಪತ್ರಿಕಾಗೋಷ್ಠಿ:

ಶಿವಾನಂದ ಎಸ್. ಪಾಟೀಲ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು

ದಿನಾಂಕ: 02-08-2018, ಗುರುವಾರ, ಸಮಯ: ಬೆಳಿಗ್ಗೆ 11.30 ಗಂಟೆಗೆ
ಸ್ಥಳ: 106, ಮೊದಲನೇ ಮಹಡಿ, ವಿಧಾನ ಸೌಧ, ಬೆಂಗಳೂರು

4. ಪತ್ರಿಕಾಗೋಷ್ಠಿ:

ಸ್ವಾತಂತ್ರ್ಯೋತ್ಸವ ಫಲಪುಷ್ಪ ಪ್ರದರ್ಶನ ಕುರಿತಂತೆ

ದಿನಾಂಕ: 02-08-2018 ಗುರುವಾರ, ಸಮಯ: ಮಧ್ಯಾಹ್ನ 12.00 ಗಂಟೆಗೆ.

ಸ್ಥಳ: ಲಾಲ್‌ಬಾಗ್‌ನ ತೋಟಗಾರಿಕೆ ಮಾಹಿತಿ ಕೇಂದ್ರ, ಡಾ. ಎಂ.ಎಚ್. ಮರೀಗೌಡ ಮೆಮೋರಿಯಲ್ ಹಾಲ್, ಲಾಲ್‌ಬಾಗ್, ಬೆಂಗಳೂರು – 560 004.

5. ಪತ್ರಿಕಾಗೋಷ್ಠಿ:

ಜಿ.ಟಿ. ದೇವೇಗೌಡ, ಉನ್ನತ ಶಿಕ್ಷಣ ಸಚಿವರು

ದಿನಾಂಕ: 02-08-2018, ಗುರುವಾರ, ಸಮಯ: ಸಂಜೆ 4-00 ಗಂಟೆಗೆ
ಸ್ಥಳ: ಸಮ್ಮೇಳನ ಸಭಾಂಗಣ, ಕೊಠಡಿ ಸಂಖ್ಯೆ 334, ವಿಧಾನ ಸೌಧ

SPECIAL PRESS INVITATION

The Chairman of the National Human Rights Commission Justice H L Dattu will inaugurate a two-day Open House Session of the National Human Rights Commission in Bengaluru on August 2 at 10-00 A M at Room No. 419 in the Fourth Floor of Vikasa Soudha.

The Members of the Commission Justice Pinaki Chandra Ghose, Justice D Murugesan and Jyotika Kalra, besides, the Chief Secretary to the State Government T M Vijaya Bhaskar, the Director General and Inspector General of Neelamani N Raju are also scheduled to be present on this occasion.

Media Persons, holding Accreditation Cards, representing both the Electronic and Print Media, are kindly attend this programme and give wide coverage to this important event.

D . P. MURALIDHAR

DEPUTY DIRECTOR (NEWS)

P. S : Kindly be present ten minutes before

the commencement of the event.

DPM

## ವಿಶೇಷ ಪತ್ರಿಕಾ ಆಮಂತ್ರಣ

ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷ ನ್ಯಾಯಮೂರ್ತಿ ಹೆಚ್ ಎಲ್ ದತ್ತು ಅವರು ಆಗಸ್ಟ್ 2 ರಂದು ಬೆಳಿಗ್ಗೆ 10–00 ಗಂಟೆಗೆ ವಿಕಾಸ ಸೌಧದ ಕೊಠಡಿ ಸಂಖ್ಯೆ : 419 ರಲ್ಲಿ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ ಬಹಿರಂಗ ವಿಚಾರಣೆಯ ಅಧಿವೇಶನವನ್ನು ಉದ್ಘಾಟಿಸಲಿದ್ದಾರೆ.

ಆಯೋಗದ ಸದಸ್ಯರಾದ ನ್ಯಾಯಮೂರ್ತಿ ಪಿನಾಕಿ ಚಂದ್ರ ಘೋಷ್, ನ್ಯಾಯಮೂರ್ತಿ ಡಿ ಮುರುಗೇಶನ್ ಹಾಗೂ ಜ್ಯೋತಿಕ ಕಾಲ್ರಾ ಅವರ ಜೊತೆಗೆ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಟಿ ಎಂ ವಿಜಯ ಭಾಸ್ಕರ್, ರಾಜ್ಯ ಪೊಲೀಸ್ ಮಹಾ ನಿರ್ದೇಶಕರೂ ಹಾಗೂ ಮಹಾ ನಿರೀಕ್ಷಕರಾದ ನೀಲಮಣಿ ಎನ್ ರಾಜು ಅವರೂ ಈ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ.

ವಿದ್ಯುನ್ಮಾನ ಹಾಗೂ ಮುದ್ರಣ ಮಾಧ್ಯಮ ಪ್ರತಿನಿಧಿಸುವ ಮಾನ್ಯತೆ ಪಡೆದ ಮಾಧ್ಯಮದವರು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಹತ್ವಯುತ ಈ ಕಾರ್ಯಕ್ರಮಕ್ಕೆ  ವ್ಯಾಪಕ ಪ್ರಚಾರ ದೊರಕಿಸಿಕೊಡಲು ಕೋರಲಾಗಿದೆ.

ಡಿ. ಪಿ. ಮುರಳೀಧರ್

ಉಪ ನಿರ್ದೇಶಕರು ( ವಾರ್ತೆ )

ವಿಸೂ : ದಯಮಾಡಿ ಕಾರ್ಯಕ್ರಮ ಪ್ರಾರಂಭಕ್ಕೆ
ಹತ್ತು ನಿಮಿಷಗಳ ಮುನ್ನ ಆಸೀನರಾಗಲು ಕೋರಿದೆ.

ಡಿ ಪಿ ಎಂ

<u>**ಪತ್ರಿಕಾ ಪ್ರಕಟಣೆ**</u>

## ಮತದಾರರ ಪಟ್ಟಿಗೆ ಹೆಸರನ್ನು ಸೇರ್ಪಡೆಗೊಳಿಸಲು ಅವಕಾಶ

ಬೆಂಗಳೂರು, ಆಗಸ್ಟ್ 1, (ಕರ್ನಾಟಕ ವಾರ್ತೆ)

ದಿನಾಂಕ: 1-1-2019 ಕ್ಕೆ 18 ವರ್ಷ ಪೂರ್ಣಗೊಳ್ಳುವ 18-19 ವರ್ಷ ತುಂಬಿದ ಯುವಕ/ಯುವತಿಯರು ಮತದಾರರ ಪಟ್ಟಿಗೆ ಹೆಸರನ್ನು ಸೇರ್ಪಡೆಗೊಳಿಸಲು ಅವಕಾಶ ಕಲ್ಪಿಸಲಾಗಿದ್ದು ಇದನ್ನು ಸದುಪಯೋಗಪಡಿಸಿಕೊಂಡು ಮತದಾರರ ಪಟ್ಟಿಗೆ ಹೆಚ್ಚಿನ ಪ್ರಮಾಣದಲ್ಲಿ ಹೆಸರನ್ನು ಸೇರ್ಪಡೆಗೊಳಿಸಲು ಜಿಲ್ಲಾಡಳಿತದೊಂದಿಗೆ ಸಹಕರಿಸಲು ಜಿಲ್ಲಾಧಿಕಾರಿ ಬಿ.ಎಂ.ಶಂಕರ್ ಅವರು ಸಾರ್ವಜನಿಕರಲ್ಲಿ ಮನವಿ ಮಾಡಿದ್ದಾರೆ.

ಈ ಕುರಿತು ಪ್ರಕಟಣೆ ನೀಡಿರುವ ಅವರು ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಯ 07 ವಿಧಾನಸಭಾ ಕ್ಷೇತ್ರಗಳ ಮತದಾರರ ನೋಂದಣಾಧಿಕಾರಿಗಳು, ಸಹಾಯಕ ಮತದಾರರ ನೋಂದಣಾಧಿಕಾರಿಗಳು, ಮತಗಟ್ಟೆ ಮಟ್ಟದ ಅಧಿಕಾರಿಗಳ ಸಭೆಯನ್ನು ಕರೆದು ಹೆಚ್ಚಿನ ಪ್ರಮಾಣದ ಮತದಾರರು, ಮತದಾರರ ಪಟ್ಟಿಗೆ ಸೇರ್ಪಡೆಗೊಳಿಸಲು ಎಲ್ಲಾ ವಾರ್ಡ್ ಮಟ್ಟದ ಹಾಗೂ ಗ್ರಾಮ ಪಂಚಾಯ್ತಿ ಮಟ್ಟದಲ್ಲಿ 10 ಜನ ಬಿ.ಎಲ್.ಓ. ಗಳಿಗೆ ಒಬ್ಬರಂತೆ ಸೂಪರ್‌ವೈಸರ್ ನಿಯೋಜಿಸುವುದು ಹಾಗೂ ಈಗಾಗಲೇ ಕಡಿಮೆ ಮತದರರು ನೋಂದಣಿಯಾಗಿರುವ ವಿಧಾನಸಭಾ ಕ್ಷೇತ್ರಗಳಲ್ಲಿ ಹೆಚ್ಚಿನ ಪ್ರಮಾಣದ ಮತದಾರರನ್ನು ಸೇರ್ಪಡೆಗೊಳಿಸಲು ಸೂಕ್ತಕ್ರಮ ವಹಿಸಲು ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ.

ಸಾರ್ವಜನಿಕರು ತಮ್ಮ ವಾಸದ ವ್ಯಾಪ್ತಿಗೆ ಒಳಪಡುವ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರು, ತಂದೆ/ಗಂಡನ ಹೆಸರು, ಮನೆ ವಿಳಾಸ, ಲಿಂಗ, ವಯಸ್ಸು, ಮುಂತಾದ ವಿವರಗಳನ್ನು ಪರಿಶೀಲಿಸಿಕೊಳ್ಳುವುದು. ಒಂದು ವೇಳೆ ಹೆಸರು ಬಿಟ್ಟು ಹೋಗಿದ್ದಲ್ಲಿ ಆಗಸ್ಟ್ 10 ರವರೆಗೆ ಬಿ.ಎಲ್.ಓ ರವರು ಮನೆ ಮನೆಗೆ ಭೀಟಿ ನೀಡುವ ಸಂದರ್ಭದಲ್ಲಿ, ಹಕ್ಕು ಮತ್ತು ಆಕ್ಷೇಪಣೆಗಳನ್ನು ಸ್ವೀಕರಿಸುವ ದಿನಾಂಕ: ಅಕ್ಟೋಬರ್ 10 ರಿಂದ ನವೆಂಬರ್ 20 ರ ಅವಧಿಯಲ್ಲಿ ನಮೂನೆ – 6 ಅನ್ನು ನೀಡಿ ಹೆಸರು ನೊಂದಾಯಿಸಿಕೊಳ್ಳಲು ಅವಕಾಶವನ್ನು ನೀಡಲಾಗಿದೆ. ಅದೇ ರೀತಿ ಹತ್ತಿರದ ತಾಲ್ಲೂಕು ಕೇರಿ, ವಾರ್ಡ್ ಕಚೇರಿ, ಗ್ರಾಮ ಪಂಚಾಯ್ತಿ ಕಚೇರಿಗೆ ಭೇಟಿ ನೀಡಿ ನಮೂನೆ-6 ಸಲ್ಲಿಸುವುದು.

ದಿನಾಂಕ:17-08-2018 07 ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯ ಇಆರ್‌ಒ/ಎಇಆರ್‌ಒ ರವರ ಕಚೇರಿಯಲ್ಲಿ ಬಿ.ಎಲ್.ಓ. ಹಾಗೂ ಚುನಾವಣಾ ಸಿಬ್ಬಂದಿಗಳ ಸಭೆ ಕರೆದು ಮತದಾರರ ಪಟ್ಟಿಗೆ ಹೆಸರನ್ನು ಸೇರ್ಪಡೆಗೊಳಿಸುವ ಕಾರ್ಯದಲ್ಲಿ ಕಟ್ಟುನಿಟ್ಟಾಗಿ ಕೆಲಸ ನಿರ್ವಹಿಸಲು ಸೂಚನೆ ನೀಡಲಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

**ಮತದಾರರ ಪಟ್ಟಿ ವಿಶೇಷ ಪರಿಷ್ಕರಣೆಯ ವೇಳಾಪಟ್ಟಿ ಹಾಗೂ ಅಧಿಕಾರಿಗಳ ವಿವರ:**

| ವಿಧಾನಸಭಾ ಕ್ಷೇತ್ರದ ಸಂಖ್ಯೆ ಮತ್ತು ಹೆಸರು | ಮತದಾರರ ನೋಂದಣಾಧಿಕಾರಿಗಳ ಹೆಸರು | ಹುದ್ದೆ | ಮೊಬೈಲ್ ಸಂಖ್ಯೆ |
|---|---|---|---|
| 150–ಯಲಹಂಕ | ಎಲ್.ಸಿ. ನಾಗರಾಜ, ಕೆ.ಎ.ಎಸ್. | ಸಹಾಯಕ ಆಯುಕ್ತರು ಮತ್ತು ಇಆರ್‌ಓ ಬೆಂಗಳೂರು ಉತ್ತರ ಉಪ ವಿಭಾಗ, ಕಂದಾಯ ಭವನ 2ನೇ ಮಹಡಿ, ಕೆ.ಜಿ.ರಸ್ತೆ, ಬೆಂಗಳೂರು. | 94481–89753 |
| 152. ಬ್ಯಾಟರಾಯನಪುರ | ಪಂಚಲಿಂಗೇಗೌಡ | ಕಂದಾಯ ಅಧಿಕಾರಿಗಳು ಮತ್ತು ಇ.ಆರ್.ಓ. ಬಿ.ಬಿ.ಎಂ.ಪಿ. ವಾರ್ಡ್ ಆಫೀಸ್, ಬಳ್ಳಾರಿ ರಸ್ತೆ, ಅಮೃತಹಳ್ಳಿ ಅಡ್ಡರಸ್ತೆ, ಬ್ಯಾಟರಾಯನಪುರ, ಬೆಂಗಳೂರು. | 94806–83600 |
| 153–ಯಶವಂತಪುರ | ದಯಾನಂದ | ಕಂದಾಯ ಅಧಿಕಾರಿಗಳು ಮತ್ತು ಇ.ಆರ್.ಓ. ಬಿ.ಬಿ.ಎಂ.ಪಿ. ರಾಜರಾಜೇಶ್ವರಿ ನಗರ, ವಿಭಾಗ ಕಚೇರಿ, ಬೆಂಗಳೂರು | 94484–87635 |
| 155 ದಾಸರಹಳ್ಳಿ | ಧನಂಜಯ್ | ಕಂದಾಯ ಅಧಿಕಾರಿಗಳು ಮತ್ತು ಇ.ಆರ್.ಓ. ಬಿ.ಬಿ.ಎಂ.ಪಿ. ದಾಸರಹಳ್ಳಿ ಬಾಗಲಗುಂಟೆ, ಬೆಂಗಳೂರು. | 94806–84121 |
| 174 ಮಹದೇವಪುರ | ಕೆಂಪರಂಗಯ್ಯ | ಕಂದಾಯ ಅಧಿಕಾರಿಗಳು ಮತ್ತು ಇ.ಆರ್.ಓ. ಬಿ.ಬಿ.ಎಂ.ಪಿ. ಆರ್.ಹೆಚ್.ಬಿ. ಬಡಾವಣೆ, ಮಹದೇವಪುರ, ಬೆಂಗಳೂರು | 94806–83165 |
| 176 ಬೆಂಗಳೂರು ದಕ್ಷಿಣ | ಚಂದ್ರಶೇಖರ್ | ಕಂದಾಯ ಅಧಿಕಾರಿಗಳು ಮತ್ತು ಇ.ಆರ್.ಓ. ಬಿ.ಬಿ.ಎಂ.ಪಿ. ಬೆಂಗಳೂರು | 94806–83988 |

| | | | |
|---|---|---|---|
| | | ದಕ್ಷಿಣ ಆರ್.ಬಿ.ಐ. ಬಡಾವಣೆ, ಪುಟ್ಟೇನಹಳ್ಳಿ, ಬೆಂಗಳೂರು. | |
| 177 ಆನೇಕಲ್ | ಹರೀಶ್ ನಾಯ್ಕ್ | ಸಹಾಯಕ ಆಯುಕ್ತರು ಮತ್ತು ಇಆರ್‌ಓ ಬೆಂಗಳೂರು ದಕ್ಷಿಣ ಉಪ ವಿಭಾಗೀಯ ಕಂದಾಯ ಭವನ, 2ನೇ ಮಹಡಿ ಕೆ.ಜಿ. ರಸ್ತೆ, ಬೆಂಗಳೂರು. | 98459-23449 |

**ಸಂಖ್ಯೆ: 763/873**

# ಧೈರ್ಯ ಸಾಹಸ ಪ್ರದರ್ಶಿಸಿದ ಮಕ್ಕಳಿಗೆ ನೀಡುವ ಹೊಯ್ಸಳ ಮತ್ತು ಕೆಳದಿ ಚೆನ್ನಮ್ಮ ಶೌರ್ಯ ಪ್ರಶಸ್ತಿಗೆ ನಾಮ ನಿರ್ದೇಶನಕ್ಕೆ ಅರ್ಜಿ ಆಹ್ವಾನ

**ಬೆಂಗಳೂರು, ಆಗಸ್ಟ್ 1 (ಕರ್ನಾಟಕ ವಾರ್ತೆ)**

ಕರ್ನಾಟಕ ಸರ್ಕಾರದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ವತಿಯಿಂದ 6 ರಿಂದ 18 ವರ್ಷದೊಳಗಿನ ಧೈರ್ಯ ಸಾಹಸ ಪ್ರದರ್ಶಿಸಿದ ಮಕ್ಕಳಿಗೆ ನೀಡುವ ಹೊಯ್ಸಳ ಮತ್ತು ಕೆಳದಿ ಚೆನ್ನಮ್ಮ ಶೌರ್ಯ ಪ್ರಶಸ್ತಿಗೆ ನಾಮ ನಿರ್ದೇಶನಕ್ಕೆ ಅರ್ಜಿ ಆಹ್ವಾನಿಸಿದೆ.

ಮಕ್ಕಳು ತಮ್ಮ ಪ್ರಾಣದ ಹಂಗನ್ನು ತೊರೆದು ಹಾಗೂ ಸಮಯಪ್ರಜ್ಞೆಯಿಂದ ಇತರರ ಪ್ರಾಣದ ರಕ್ಷಣೆಗಾಗಿ ಧೈರ್ಯ ಸಾಹಸ ಪ್ರದರ್ಶಿಸಿದ ಬಾಲಕರಿಗೆ "ಹೊಯ್ಸಳ" ಮತ್ತು ಬಾಲಕಿಯರಿಗೆ "ಕೆಳದಿ ಚೆನ್ನಮ್ಮ" ಪ್ರಶಸ್ತಿಯನ್ನು ಮಕ್ಕಳ ದಿನಾಚರಣೆ ಕಾರ್ಯಕ್ರಮದಲ್ಲಿ ಪ್ರದಾನ ಮಾಡುತ್ತದೆ.

ಪ್ರಕರಣವು ಆಗಸ್ಟ್ 2017 ರಿಂದ ಜುಲೈ 2018ರೊಳಗೆ ನಡೆದಿರಬೇಕು. ದಿನಾಂಕ: 01.08.2000 ರಂದು ಹಾಗೂ ನಂತರ ಜನಿಸಿದ ಮಕ್ಕಳು ಈ ಪ್ರಶಸ್ತಿಗೆ ಅರ್ಹರಾಗಿರುತ್ತಾರೆ.

ಪ್ರಶಸ್ತಿಗೆ ಆಯ್ಕೆಯಾದ ಮಕ್ಕಳಿಗೆ ತಲಾ ರೂ.10,000/-ಗಳ ನಗದು ಬಹುಮಾನ ಮತ್ತು ಪ್ರಶಸ್ತಿ ಪತ್ರ ಒಳಗೊಂಡಿರುತ್ತದೆ.

2018ನೇ ಸಾಲಿನ ಪ್ರಶಸ್ತಿಗಾಗಿ ನಿಗದಿಪಡಿಸಿರುವ ಅರ್ಜಿ ನಮೂನೆಗಳನ್ನು ಸಂಬಂಧಿಸಿದ ಜಿಲ್ಲೆಯ ಉಪ ನಿರ್ದೇಶಕರು, ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಇವರಿಂದ ಪಡೆದು ಭರ್ತಿ ಮಾಡಿದ ಅರ್ಜಿಗಳನ್ನು ಸಂಬಂಧಪಟ್ಟ ಜಿಲ್ಲೆಯ ಉಪ ನಿರ್ದೇಶಕರು, ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರಿಗೆ ದಿನಾಂಕ:31.08.2018ರೊಳಗೆ ಸಲ್ಲಿಸತಕ್ಕದ್ದು. ಅರ್ಜಿಗಳನ್ನು ಕನ್ನಡ ಭಾಷೆಯಲ್ಲಿಯೇ ಸಲ್ಲಿಸತಕ್ಕದ್ದು ಅಧಿಕೃತ ಪ್ರಕಟಣೆ ತಿಳಿಸಿದೆ.

**ಸಂಖ್ಯೆ: 764/874**

## APPLICATIONS INVITED FOR HOYSALA AND KELADI CHENNAMMA BRAVERY AWARD FOR CHILDREN

Bengaluru, August 1 (Karnataka Information)

The Department of Women and Child Development, Government of Karnataka on the occasion of Children's Day, confers Bravery Award for the Children in the age group of 6 to 18 years who have exhibited exceptional courage and presence of mind to save the life of others in dangerous circumstances. Boys are identified under "Hoysala" and girls under "Keladi Chennamma" Award. The incident should have occurred between August 2017 to July 2018. Children born on or after 01.08.2000 are eligible for this Award. The Award carries cash prize of Rs. 10,000/- and a citation.

The prescribed forms for the year 2018 may be obtained from the Deputy Director of Women & Child Development Department in the respective Districts. The filled applications should be submitted to the concerned District Deputy Director of Women & Child Development Department on or before 31.08.2018. The applications should be submitted in Kannada only says official press release.

**ಸಂಖ್ಯೆ: 765/875**

# ಆಗಸ್ಟ್ 2 ಹಾಗೂ 3 ರಂದು
# ಬಹಿರಂಗ ವಿಚಾರಣೆಗೆ ಹಾಜರಾಗಲು ಗುರುತಿನ ಚೀಟಿ ಕಡ್ಡಾಯ

ಬೆಂಗಳೂರು, ಆಗಸ್ಟ್ 1 (ಕರ್ನಾಟಕ ವಾರ್ತೆ)

ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ, ನವದೆಹಲಿ ಇವರು ಆಗಸ್ಟ್ 2 ಹಾಗೂ 3 ರಂದು ವಿಕಾಸಸೌಧ, ಬೆಂಗಳೂರು ಇಲ್ಲಿ ಬಹಿರಂಗ ವಿಚಾರಣೆ ನಡೆಸಲಿದ್ದು, ವಿಚಾರಣೆಗೆ ಹಾಜರಾಗುವ ಬಗ್ಗೆ ದೂರುದಾರರಿಗೆ ಎನ್‌ಹೆಚ್‌ಆರ್‌ಸಿ ಯಿಂದ ಈಗಾಗಲೇ ಪತ್ರಗಳನ್ನು ರವಾನಿಸಲಾಗಿರುತ್ತದೆ.

ಸದರಿ ದೂರುದಾರರು ಬಹಿರಂಗ ವಿಚಾರಣೆ ದಿನಾಂಕದಂದು ವಿಕಾಸಸೌಧವನ್ನು ಪ್ರವೇಶಿಸಲು ಅನುಕೂಲವಾಗುವಂತೆ ಎನ್‌ಹೆಚ್‌ಆರ್‌ಸಿ ಯಿಂದ ವಿಚಾರಣೆಗೆ ಹಾಜರಾಗುವಂತೆ ನೀಡಿದ ನೋಟೀಸ್ ಪತ್ರದ ಪ್ರತಿ, ದೂರುದಾರರ ಭಾವಚಿತ್ರವನ್ನೊಳಗೊಂಡ ಯಾವುದಾದರು ಒಂದು ಗುರುತಿನ ಚೀಟಿ (ಮತದಾರರ ಗುರುತಿನ ಚೀಟಿ/ಆಧಾರ್ ಕಾರ್ಡ್/ಪಡಿತರ ಚೀಟಿ/ಪಾನ್ ಕಾರ್ಡ್/ಡ್ರೈವಿಂಗ್ ಲೈಸೆನ್ಸ್/ಪಾಸ್‌ಪೋರ್ಟ್/ಇಲಾಖೆ, ನಿಗಮ, ಮಂಡಳಿ, ಕಂಪನಿಗಳು) ನೀಡಿದ ಗುರುತಿನ ಚೀಟಿ ಇವುಗಳಲ್ಲಿ ಯಾವುದಾದರೂ ಒಂದನ್ನು ಕಡ್ಡಾಯವಾಗಿ ತರುವಂತೆ ಸಮಾಜ ಕಲ್ಯಾಣ ಇಲಾಖೆಯ ಆಯುಕ್ತರು ಅಧಿಕೃತ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

**ಸಂಖ್ಯೆ: 766/876**

# "ಕೃಷಿಕರ ಕೈಗೆ ಲೇಖನಿ" ರಾಜ್ಯ ಮಟ್ಟದ ತರಬೇತಿ ಶಿಬಿರಕ್ಕೆ ಅರ್ಜಿ ಆಹ್ವಾನ

**ಬೆಂಗಳೂರು, ಆಗಸ್ಟ್ 1 (ಕರ್ನಾಟಕ ವಾರ್ತೆ)**

ದೇಶದ ಇತಿಹಾಸದಲ್ಲಿಯೇ ಪ್ರಥಮ ಬಾರಿಗೆ ಕೃಷಿ ವಿಶ್ವವಿದ್ಯಾನಿಲಯ ಬೆಂಗಳೂರು ಮತ್ತು ಕೃಷಿ ಇಲಾಖೆ, ಕರ್ನಾಟಕ ಸರ್ಕಾರ **"ಕೃಷಿಕರ ಕೈಗೆ ಲೇಖನಿ"** ಎಂಬ ಮೂರು ದಿನಗಳ ಅವಧಿಯ ಮೂರು ರಾಜ್ಯಮಟ್ಟದ ತರಬೇತಿ ಕಾರ್ಯಕ್ರಮಗಳಿಗೆ ಕೃಷಿಕರಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ.

ಓದು-ಬರಹ ಬರುವ 90 ಕೃಷಿಕರಿಗೆ ಮಾತ್ರ ತರಬೇತಿ ಶಿಬಿರಕ್ಕೆ ಅವಕಾಶವಿರುತ್ತದೆ. ತರಬೇತಿಯಲ್ಲಿ ಕೃಷಿ ಸುದ್ದಿ, ಸುದ್ದಿ ಮೂಲಗಳು, ಕೃಷಿ ಸುದ್ದಿ ವರದಿಗಾರಿಕೆ, ದೃಷ್ಟಾಂತಗಳು, ಜನಪ್ರಿಯ ಲೇಖನಗಳು, ಕೃಷಿ ಯಶೋಗಾಥೆಗಳು, ಪತ್ರಿಕಾ ಪ್ರಕಟಣೆ, ಪತ್ರಿಕಾ ಗೋಷ್ಠಿ ಆಯೋಜನೆ, ರೇಡಿಯೊ / ದೂರದರ್ಶನ ಸಂದರ್ಶನದ ಹಸ್ತಪ್ರತಿ ತಯಾರಿಸುವ ವಿಧಾನದ ಬಗ್ಗೆ ಕೌಶಲ್ಯಭರಿತ ತರಬೇತಿ ನೀಡಲಾಗುವುದು.

ತರಬೇತಿ ಕಾರ್ಯಕ್ರಮವು ಉಚಿತವಾಗಿದ್ದು ಕನ್ನಡ ಮಾಧ್ಯಮದಲ್ಲಿರುತ್ತದೆ. ಆಸಕ್ತಿಯುಳ್ಳ ರೈತ ಬಾಂಧವರು ಹೆಸರು, ವಯಸ್ಸು, ವಿಳಾಸ, ವಿದ್ಯಾರ್ಹತೆ, ಕೃಷಿಯಲ್ಲಿ ಸಾಧನೆ ಮತ್ತು ಮೊಬೈಲ್ ಸಂಖ್ಯೆಯೊಂದಿಗೆ **ಡಾ॥ ಕೆ. ಶಿವರಾಮು, ಹಿರಿಯ ವಾರ್ತಾ ತಜ್ಞರು, ವಿಸ್ತರಣಾ ನಿರ್ದೇಶನಾಲಯ, ಕೃ.ವಿ.ವಿ.,**

**ಬೆಂಗಳೂರು-560024** ಇವರಲ್ಲಿ ನೊಂದಾಯಿಸಿಕೊಳ್ಳುವುದು. ಹೆಚ್ಚಿನ ಮಾಹಿತಿಗಾಗಿ ಮೊಬೈಲ್ ಸಂಖ್ಯೆ:9972035456 / 8277810930 ಗೆ ಸಂಪರ್ಕಿಸಲು ಅಧಿಕೃತ ಪ್ರಕಟಣೆ ತಿಳಿಸಿದೆ.

ಕೃಷಿಯಲ್ಲಿ ನೂತನ ತಂತ್ರಜ್ಞಾನವನ್ನು ಅಳವಡಿಸಿಕೊಂಡ ಕೃಷಿಕರ ಸುದ್ದಿ, ಲೇಖನ ಮತ್ತು ಯಶೋಗಾಥೆಗಳನ್ನು ವಿಜ್ಞಾನಿಗಳು, ಅಧಿಕಾರಿಗಳು ಮತ್ತು ಮಾಧ್ಯಮದವರು ಸುದ್ದಿ ಮಾಡಿ ರೈತರಿಗೆ ಮತ್ತು ಜನ ಸಾಮಾನ್ಯರಿಗೆ ಮುಟ್ಟಿಸುತ್ತಾರೆ.

ಲೇಖನಗಳಲ್ಲಿ ರೈತರ ನಿಜವಾದ ಭಾವನೆ, ಅಭಿಪ್ರಾಯ ಮತ್ತು ಅನುಭವಗಳು ಕೆಲವೊಮ್ಮೆ ವ್ಯಕ್ತವಾಗುವುದಿಲ್ಲ ಮತ್ತು ಇವು ರೈತರ ಮನದ ಮಾತುಗಳಾಗದೆ ಲೇಖಕರ ಮಾತುಗಳಾಗಿರುತ್ತವೆ. ಕೃಷಿಕರೇ ಲೇಖಕರಾದರೆ ನಿಷ್ಪಕ್ಷಪಾತ ಮತ್ತು ವಸ್ತುನಿಷ್ಠ ಅಂಶಗಳು ಹೊರಬರಲು ಸಹಕಾರಿಯಾಗುತ್ತದೆ.

ವಿದ್ಯಾವಂತರು ಮತ್ತು ಪದವೀಧರರು ಕೃಷಿಯಲ್ಲಿ ಸ್ವಯಂ ಉದ್ಯೋಗಿಗಳಾಗಿ, ಕೃಷಿ ಸಂಶೋಧಕರಾಗಿ ಹೊಸ ಹೊಸ ಅವಿಷ್ಕಾರಗಳನ್ನು ಕಂಡು ಹಿಡಿಯುತ್ತಿದ್ದಾರೆ, ಇವು ಗಮನಾರ್ಹ ಸಾಧನೆಗಳಾಗಿದ್ದರು ಸಹ ಮಹತ್ತರವಾದ ಸುದ್ದಿಯಾಗುವುದಿಲ್ಲ. ವಿದ್ಯಾವಂತ ರೈತರಿಗೆ ಲೇಖನಿಯನ್ನು ನೀಡಿ ಕೃಷಿಕರನ್ನೇ ಲೇಖಕರನ್ನಾಗಿ ರೂಪಿಸಿದರೆ ಸಕಾಲದಲ್ಲಿ ವಸ್ತುನಿಷ್ಟ, ನಿಖರವಾದ, ಅರ್ಥಪೂರ್ಣ ಮತ್ತು ಸುಸಂಗತ ಮಾಹಿತಿ ಹೊರ ಹೊಮ್ಮುತ್ತದೆ.

ಕೃಷಿಕರೇ ಪ್ರಕಟಿಸುವ ಮಾಹಿತಿಯನ್ನು ಇತರೆ ರೈತರು ನಮ್ಮವರ ಅನುಭವಭರಿತ ನಿಜವಾದ ಕೃಷಿ ಮಾಹಿತಿಯೆಂದು ವ್ಯಾಪಕ ಪ್ರಚಾರ ಪಡೆದು ಶೀಘ್ರ ಅಳವಡಿಕೆಗೆ ಅನುವು ಮಾಡಿಕೊಡುತ್ತದೆ ಮತ್ತು ಶೀಘ್ರ ಕೃಷಿ ಅಭಿವೃದ್ಧಿಗೆ ನಾಂದಿಯಾಗುತ್ತದೆ.

**ಸಂಖ್ಯೆ: 767/877**

# ಪ್ಲಾಸ್ಟಿಕ್ ನೀರಿನ ಬಾಟಲು ಬಳಸದಿರಲು ಸೂಚನೆ

ಬೆಂಗಳೂರು, ಆಗಸ್ಟ್ 1 (ಕರ್ನಾಟಕ ವಾರ್ತೆ)

ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖೆಗಳಲ್ಲಿ ಹಾಗೂ ಅದರ ಆಡಳಿತಾತ್ಮಕ ಇಲಾಖೆ, ಸಂಸ್ಥೆ ಮತ್ತು ನಿಗಮದಲ್ಲಿ ನಡೆಯುವ ಸಭೆ ಸಮಾರಂಭಗಳಲ್ಲಿ ಕುಡಿಯುವ ನೀರನ್ನು ಪ್ರಾಸ್ಟಿಕ್ ಬಾಟಲುಗಳಲ್ಲಿ ಒದಗಿಸದೆ ಪರ್ಯಾಯ ಮಾರ್ಗದಲ್ಲಿ ಒದಗಿಸುವಂತೆ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳುವಂತೆ ಆಹಾರ, ನಾಗರಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖೆ ಸುತ್ತೋಲೆಯನ್ನು ಹೊರಡಿಸಿದೆ.

ಹೆಚ್ಚಿನ ಪ್ಲಾಸ್ಟಿಕ್ ತ್ಯಾಜ್ಯದಿಂದಾಗಿ ಹಲವಾರು ಗಂಭೀರ ಸಮಸ್ಯೆಗಳು ಉದ್ಭವವಾಗುತ್ತಿದ್ದು, ಇದರಿಂದ ಮಾನವನ, ಪಶು, ಪಕ್ಷಿ ಮತ್ತು ಪ್ರಾಣಿಗಳ ಆರೋಗ್ಯದ ಮೇಲೆ ದುಷ್ಪರಿಣಾಮ ಉಂಟಾಗುವುದರ ಜೊತೆಗೆ ನೈಸರ್ಗಿಕ ಸ್ವಚ್ಛತೆಯನ್ನು ಕಾಪಾಡುವುದು

ಬಹಳಷ್ಟು ದುಸ್ತವಾಗಿರುತ್ತದೆ.  ಹಾಗಾಗಿ ಪ್ಲಾಸ್ಟಿಕ್ ತ್ಯಾಜ್ಯ ನಿಯಂತ್ರಿಸುವುದ ಇಂದಿನ ಅತ್ಯಂತ ಅವಶ್ಯವಾಗಿರುತ್ತದೆ.

ಈ ದಿಸೆಯಲ್ಲಿ ಪ್ರಾಥಮಿಕ ಹಂತದಲ್ಲಿ ಕೆಲವೊಂದು ಪ್ಲಾಸ್ಟಿಕ್ ಬಳಕೆಯ ನಿರ್ಬಂಧದ ಕ್ರಮಗಳನ್ನು ಸರ್ಕಾರ/ಇಲಾಖೆಯ ಹಂತದಲ್ಲಿ ಕೈಗೊಳ್ಳಬೇಕಾಗಿರುತ್ತದೆ.  ಅಹಾರ, ನಾಗರಿಕಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖೆಯ ವತಿಯಿಂದ, ಇಲಾಖಾ ಮುಖ್ಯಸ್ಥರು ಹಾಗೂ ಆಡಳಿತಾತ್ಮಕ ಕಚೇರಿಗಳಲ್ಲಿ, ಜಿಲ್ಲಾ ವೇದಿಕೆಯ ಅಧ್ಯಕ್ಷರುಗಳು ನಡೆಸುವ ವಿವಿಧ ಸಭೆ/ಸಮಾರಂಭಗಳಲ್ಲಿ ಕುಡಿಯುವ ನೀರನ್ನು ಪ್ಲಾಸ್ಟಿಕ್ ಬಾಟಲ್‌ಗಳಲ್ಲಿ ಒದಗಿಸುವ  ಬದಲು 20 ಲೀಟರ್‌ಗಳ ಕ್ಯಾನ್‌ಗಳನ್ನು ಖರೀದಿಸಿ ಸ್ಟೀಲ್ ಗ್ಲಾಸ್/ಕಪ್ ಮೂಲಕ ಕುಡಿಯುವ ನೀರನ್ನು ಒದಗಿಸಲು ಕ್ರಮ ಕೈಗೊಳ್ಳುವಂತೆ ಸೂಚಿಸಿದ್ದು  ಈ ಸೂಚನೆಯನ್ನು ಇಲಾಖೆಯ ಎಲ್ಲಾ ಅಧಿಕಾರಿಗಳು, ಸಿಬ್ಬಂದಿ ವರ್ಗದವರು ತಮ್ಮ ಹಂತದಲ್ಲಿ ಅನುಷ್ಠಾನಗೊಳಿಸಲು ಕ್ರಮ ಕೈಗೊಂಡು ಮಾದರಿಯಾಗಬೇಕೆಂದು ಸಹ ತಿಳಿಸಿದೆ.